ಅಪೇಕ್ಷಿಸುವ ವೇತನ ಇಷ್ಟು ಎಂಬ ವಿವರ ಪಡೆದುಕೊಂಡಿದ್ದ. ಮತ್ತೆ ಅದನ್ನು ಉಪಾಯವಾಗಿ ಶರ್ಮಾರ ಅವಗಾಹನೆಗೂ ತಂದಿದ್ದ.

ಆರು ತಿಂಗಳ ಹಿಂದೆ ಮೆನನಿಗೂ ಒಂದು ಆಫರ್ ಬಂದಿತ್ತು. ಆ ಕಂಪೆನಿಯವರು ಮೆನನ್ ಕೇಳಿದ್ದ ಸಂಬಳಕ್ಕೆ ಒಪ್ಪಿಕೊಳ್ಳದೆ ಸ್ವಲ್ಪ ಮಟ್ಟಿಗೆ ಸಂಬಳ ಜಾಸ್ತಿ ಕೊಡುವ ಕೌಂಟರ್ ಆಫರ್ ನೀಡಿದ್ದರು. 'ಪರ್ಫಾರ್ಮೆನ್ಸ್ ನೋಡಿ ಮತ್ತೆ ಇಂಕ್ರಿಮೆಂಟ್ ಕೊಡುವಾ' ಎಂದು ಮೊಣಕೈಗೆ ಬೆಲ್ಲ ಬೇರೆ ಹಚ್ಚಿ ಮೆನನನ್ನು ಇಕ್ಕಟ್ಟಿಗೆ ಸಿಲುಕಿಸಿದ್ದರು. ತಾನೀಗ ಇರುವ ನೆಲೆಯನ್ನೂ, ಹೋಗಿ ಸೇರಿದ ಕಂಪೆನಿಯಲ್ಲಿ ಸಿಗಬಹುದಾದ ನೆಲೆಯನ್ನೂ ತೂಗುತ್ತಲೇ ಬಹಳ ದಿನ ದೂಡಿದ್ದ ಮೆನನ್ ಕೊನೆಗೂ ಅವರ ಆಫರನ್ನು ಒಪ್ಪಿಕೊಳ್ಳಲಿಲ್ಲ. ಎರಡು ವರ್ಷಗಳಲ್ಲಿ ಶರ್ಮಾ ರಿಟೈರಾದರೆ ಇಲ್ಲಿಯ ಎಂ.ಡಿ. ಹುದ್ದೆಗೆ ತಾನು ಪ್ರಮುಖ ಉಮೇದುವಾರ. ಸ್ಥಾನಮಾನಗಳೊಂದಿಗೆ ವೃತ್ತಿಜೀವನದ ಸಂಜೆಯನ್ನು ಪರಿಚಿತ ಪರಿಸರದಲ್ಲಿ ಕಳೆಯುವ ಅವಕಾಶವೇ ಮೇಲು ಎನ್ನುವ ನಿರ್ಧಾರ ತಳೆದ ಮೆನನ್, ಇರುವ ನೆಲೆಯನ್ನೇ ಭದ್ರಪಡಿಸಿಕೊಳ್ಳುವ ನಿರ್ಧಾರಕ್ಕೆ ಬಂದಿದ್ದ. ಇಲ್ಲಿಯ ಎಂ.ಡಿ. ಪಟ್ಟ ತನಗೆ ಸಿಕ್ಕುವುದೇ ಹೌದಾದರೆ ಗೌರವ್ ಜೊತೆಗಿದ್ದರೆ ಬಹಳಷ್ಟು ಅನುಕೂಲ. ಈಗಲೇ ಅವನ ಸಂಬಳ ಜಾಸ್ತಿ ಮಾಡಿಸಿಕೊಟ್ಟರೆ ನಾಳೆ ತನ್ನ ವೇತನದ ಮಾತುಕತೆ ಗೌರವನ ವೇತನಕ್ಕಿಂತ ಮೇಲ್ಮಟ್ಟದಲ್ಲಿಯೇ ಸಹಜವಾಗಿ ಆರಂಭವಾಗುತ್ತದೆ!... ತಾರ್ಕಿಕವಾಗಿ ಯೋಚಿಸಿದ್ದ ಮೆನನ್.

★★★

ಶರ್ಮಾ ತಿಂಗಳ ಸಭೆಯಲ್ಲಿ ಡೈರೆಕ್ಟರುಗಳ ಜೊತೆಯಲ್ಲಿ ಕುಳಿತಿದ್ದರು. ಅಲ್ಲಿ ಶರ್ಮರೊಬ್ಬರನ್ನು ಹೊರತು ಉಳಿದವರೆಲ್ಲರೂ ಕಂಪೆನಿಯಲ್ಲಿ ಹಣ ಹೂಡಿದ ಕುಟುಂಬಗಳ ಪ್ರತಿನಿಧಿಗಳು. ಕಂಪೆನಿಯ ವಹಿವಾಟುಗಳ ಸಮೀಕ್ಷೆ ಮುಂದುವರಿದಿತ್ತು. ಈ ಬಾರಿ ಕಂಪೆನಿ ಆಕರ್ಷಕ ಎನ್ನುವಷ್ಟಲ್ಲದಿದ್ದರೂ ಮರ್ಯಾದೆ ಉಳಿಸಿಕೊಳ್ಳುವಷ್ಟು ಪ್ರಗತಿ ಸಾಧಿಸಿದ್ದನ್ನು ತಿಳಿದಿದ್ದ ಶರ್ಮಾ ಸಮೀಕ್ಷೆಯ ಬಗ್ಗೆ ಹೆಚ್ಚಿಗೆ ತಲೆಕೆಡಿಸಿಕೊಂಡಿರಲಿಲ್ಲ. ಅವರು ಗೌತಮನ ಪ್ರಕರಣವನ್ನು ಹೇಗೆ ಕೈಗೆತ್ತಿಕೊಂಡು ನಿಭಾಯಿಸುವುದು ಎನ್ನುವುದರ ಬಗ್ಗೆಯೇ ಚಿಂತಿತರಾಗಿದ್ದರು. ಕೊನೆಗೂ ಸಮಯ ಸಾಧಿಸಿಕೊಂಡು ಮಾತು ಆರಂಭಿಸಿದ್ದರು. 'ವರ್ಷದ ಇದುವರೆಗಿನ ಅವಧಿ ಯಾವುದೇ ದೊಡ್ಡ ಸಮಸ್ಯೆಯಿಲ್ಲದೆ ಕಳೆದಿದೆ. ಆದರೆ ಇನ್ನು ಮುಂದೆ ಹೇಗೆ ಎನ್ನುವುದನ್ನು ಆಲೋಚಿಸುವಾಗ ಸ್ವಲ್ಪ ಅಳುಕು ಮೂಡಿ ಬರುತ್ತಿದೆ...' ಎಂದು ಆರಂಭಿಸಿ, 'ನಮ್ಮ ಕಂಪೆನಿಯ ಉತ್ತಮ ಉದ್ಯೋಗಿಗಳನ್ನು ಸೆಳೆಯುವ ಕಾರ್ಯವನ್ನು ಆರಂಭಿಸಿರುವ ನಮ್ಮ ಪ್ರತಿಸ್ಪರ್ಧಿ ಕಂಪೆನಿಗಳು ಗೌರವನನ್ನು ಸಂಪರ್ಕಿಸಿವೆ' ಎಂದು ಉಪಾಯವಾಗಿ ಸಮಸ್ಯೆಯನ್ನು ಸಭೆಯ ಮುಂದೆ ಇಟ್ಟರು. 'ಗೌರವ ಒಳ್ಳೆಯ ಉದ್ಯೋಗಿಯಾಗಿದ್ದು ಕಂಪೆನಿಗೆ ನಿರಂತರ ಕೊಡುಗೆ ನೀಡುವವನಾಗಿದ್ದು ಆತ ಬಿಟ್ಟು ಹೋದರೆ ನಮ್ಮ ಮೇಲೆ ಪ್ರತಿಕೂಲ ಪರಿಣಾಮ ಬೀಳುವುದು ಖಂಡಿತ ಎಂದು ನನ್ನ ಅಭಿಪ್ರಾಯ' ಎಂದು ಹೇಳಿ 'ಮೆನನ್ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ' ಎಂದೂ ಸೇರಿಸಿದರು. 'ಗೌರವನನ್ನು ಕರೆದು ಸ್ವಲ್ಪ ಇಂಕ್ರಿಮೆಂಟು ಕೊಟ್ಟು ಸುಧಾರಿಸಿ... ಇದು ಬೋರ್ಡ್ ಮೀಟಿಂಗಿನಲ್ಲಿ ಬರುವಷ್ಟು ಮುಖ್ಯ ವಿಷಯವೇ?' ಎಂದು ತಳ್ಳಿ ಹಾಕಲು ಪ್ರಯತ್ನಿಸಿದ ಯುವ ಡೈರೆಕ್ಟರರೊಬ್ಬರನ್ನು ತಡೆದು 'ಮೊದಲು ನಾನೂ ಹಾಗೆಯೇ ಎಣಿಸಿದ್ದೆ, ಆದರೆ ಗೌರವನಿಗೆ ಆ ಕಂಪೆನಿ ಕೊಟ್ಟಿರುವ ಆಫರ್ ಕೇಳಿದರೆ ನೀವು ಕೂಡ ಬೆರಗಾಗಿ ಸಮಸ್ಯೆಯ ಆಳವನ್ನು